ನಾನು ಕಂಡ **ವಿವೇಕಾನಂದ**

ಡಾ.ಆರ್‌. ಬಾಲಸುಬ್ರಹ್ಮಣ್ಯಂ



# ಹೀಗಾಯಿತು ನಾಯಕನ ಉದಯ

ನಾಯಕತ್ವವು ನಿಶ್ಚಯವಾಗಿಯೂ ಬಲು ದೊಡ್ಡ ಜವಾಬ್ದಾರಿ. ಇತರರನ್ನು ಮುನ್ನಡೆಸಲು ದೂರದೃಷ್ಟಿಯ ಜತೆಗೆ, ಆ ದೂರದೃಷ್ಟಿಯನ್ನು ತನ್ನೊಂದಿಗೆ ಹಂಚಿಕೊಳ್ಳಲು ಇತರರಲ್ಲೂ ಸ್ಫೂರ್ತಿ ತುಂಬಬೇಕಾಗುತ್ತದೆ. ಉದ್ದಿಮೆ ಅಥವಾ ರಾಜಕೀಯ ಕ್ಷೇತ್ರದಲ್ಲಾದರೆ ನಾಯಕತ್ವ ವಹಿಸಿಕೊಂಡು, ಸ್ಫೂರ್ತಿ ತುಂಬುವುದು ಅಷ್ಟೇನೂ ಕಷ್ಟವಲ್ಲ; ಆದರೆ, ದೃಢ ಸಂಕಲ್ಪ ಹಾಗೂ ಮನಃಪೂರ್ವಕವಾಗಿ ಬಡತನ-ಬ್ರಹ್ಮಚರ್ಯವನ್ನು ಒಪ್ಪಿ ಆತ್ಮ ಸಾಕ್ಷಾತ್ಕಾರದ ಕಾಣ್ಕೆಯನ್ನು ಹಂಚಿಕೊಳ್ಳುವಂತೆ ಮುನ್ನಡೆಸಲು ವಿಶೇಷ ನಾಯಕತ್ವ ಅಗತ್ಯ.

ಶ್ರೀ ರಾಮಕೃಷ್ಣ ಪರಮಹಂಸರು ಸಾಮಾನ್ಯ ಚೇತನವಾಗಿರಲಿಲ್ಲ. ಸಾಮಾನ್ಯ ಭಕ್ತರನ್ನು ಮೌಲ್ಯಯುತವಾದ ಹಾಗೂ ಧಾರ್ಮಿಕ ಜೀವನ ನಡೆಸುವಂತೆ ಪ್ರೇರೇಪಿಸುವ ಹೊಣೆಗಾರಿಕೆಯ ಜತೆಗೆ, ತಮ್ಮ ಸಂದೇಶವನ್ನು ಜಗತ್ತಿನಾದ್ಯಂತ ಪ್ರಸರಿಸುವ ಯುವ ಪಡೆಯನ್ನು ಕಟ್ಟುವ ಗುರಿ ಅವರದ್ದಾಗಿತ್ತು. ತಮ್ಮ ಜೀವಿತದ ನಂತರವೂ, ತಾವು ಹೊಂದಿದ್ದ ಘನೋದ್ದೇಶವನ್ನು ಸಾಧಿಸುವ ಸಲುವಾಗಿ ವ್ಯವಸ್ಥಿತವಾಗಿ ಹಾಗೂ ಸಂಘಟಿತವಾಗಿ ಈ ಯುವಕರು ಕೆಲಸ ಮಾಡುತ್ತಾರೆ ಎಂಬುದನ್ನು ಅವರು ಖಾತ್ರಿಪಡಿಸಿಕೊಳ್ಳಬೇಕಿತ್ತು. ಅಂತ್ಯಕಾಲದಲ್ಲಿ ಬಂದ ಕಾಯಿಲೆ ಹಾಗೂ ಸಮೀಪಿಸುತ್ತಿದ್ದ ಸಾವು, ಪ್ರತಿ ವ್ಯಕ್ತಿಯನ್ನೂ ಖುದ್ದಾಗಿ ತರಬೇತುಗೊಳಿಸುವ ಜತೆಗೆ, ವಿಶ್ವಾಸಾರ್ಹ, ಪ್ರೀತಿಪಾತ್ರ, ಇತರರೆಲ್ಲರ ಮೆಚ್ಚುಗೆಗೆ ಪಾತ್ರವಾದ, ಎಲ್ಲ ಕಾರ್ಯಗಳನ್ನೂ ನಿರ್ವಹಿಸಿಕೊಂಡು ಹೋಗಬಲ್ಲ ನಾಯಕನನ್ನು ರೂಪಿಸುವ ಜರೂರು ಸಹ ಅವರಿಗೆ ಎದುರಾಗಿತ್ತು.

ರಾಮಕೃಷ್ಣರು ಇವೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು, ನರೇಂದ್ರನಾಥ ದತ್ತ ಅವರನ್ನು ಯುವಕರ ತಂಡದ ನಾಯಕನನ್ನಾಗಿಸಲು ಸದ್ದಿಲ್ಲದೇ ಸಜ್ಜುಗೊಳಿಸುತ್ತಿದ್ದರು. ಒಂದು ದಿನ ನರೇಂದ್ರ ಅವರನ್ನು ಕರೆದು, 'ನಾನು ಅವರನ್ನೆಲ್ಲಾ ನಿನ್ನ ಉಸ್ತುವಾರಿಗೆ ಒಪ್ಪಿಸುತ್ತೇನೆ. ನನ್ನ ಕಾಲಾನಂತರವೂ ಅವರು ತಮ್ಮ ಮನೆಗೆ ವಾಪಸ್ಸಾಗದೆ ಆಧ್ಯಾತ್ಮಿಕ ಕೈಂಕರ್ಯಗಳನ್ನು ಮುಂದುವರಿಸುವಂತೆ ನೋಡಿಕೋ' ಎಂದು ಹೇಳಿದರು.

ಗುರು ಶಿಷ್ಯ ಸಂಬಂಧ ಬಲು ಅನನ್ಯವಾದದ್ದು. ಬದುಕಿನಲ್ಲಿ ನಿಜವಾದ ಗುರುವನ್ನು ಪಡೆಯುವ ಅದೃಷ್ಟ ಎಲ್ಲರಿಗೂ ಇರುವುದಿಲ್ಲ. ಗುರುವು ಶಿಷ್ಯನಿಗೆ ಪ್ರೀತಿ, ವಾತ್ಸಲ್ಯ, ಮಾರ್ಗದರ್ಶನ ಹಾಗೂ ಆತ್ಮಬಲದ ಮೂಲ ಮನಗಾಣಿಸುವುದನ್ನು ಅನುಭವಿಸಿಯೇ ಅರಿಯಬೇಕು. ಈ ಅನನ್ಯ ಸಂಬಂಧದ ಬಗ್ಗೆ ಮಾತುಗಳಲ್ಲಿ ಹೇಳಲು ಹೊರಟರೆ ಅದು ಬಲು ಸೀಮಿತವಾಗುತ್ತದೆ.

ಶ್ರೀ ರಾಮಕೃಷ್ಣ ಮತ್ತು ನರೇಂದ್ರರ ಸಂಬಂಧ ಇವೆಲ್ಲವನ್ನೂ ಒಳಗೊಂಡಿತ್ತು; ಅಷ್ಟೇ ಅಲ್ಲ, ಅದಕ್ಕೂ ಮೀರಿದ್ದಾಗಿತ್ತು. ನರೇಂದ್ರರು ತಮ್ಮ ಗುರುವಿನಲ್ಲಿ, ಗುರುವಿಗಿಂತಲೂ ಮಿಗಿಲಾದದ್ದನ್ನು ಕಂಡರು. ಅವರ ಪಾಲಿಗೆ ರಾಮಕೃಷ್ಣರು ದೇವರ ಅವತಾರದಂತೆ ತೋರಿದರು. ಹೀಗಾಗಿ ನರೇಂದ್ರರು ರಾಮಕೃಷ್ಣರನ್ನು ಪೂಜಿಸಿದರು. ರಾಮಕೃಷ್ಣರ ಮಾತುಗಳು ಹಾಗೂ ಚಿಂತನೆಗಳು ನರೇಂದ್ರರ ಆಧ್ಯಾತ್ಮಿಕ ಬೆಳವಣಿಗೆಯ ಬುನಾದಿಯಾದವು. ರಾಮಕೃಷ್ಣರ ಅಂತಿಮ ದಿನಗಳು ಅವರಿಗೆ ತೀವ್ರ ದೈಹಿಕ ಯಾತನೆಯ ದಿನಗಳಾಗಿದ್ದವು. ಅದೇ ವೇಳೆ, ತಮ್ಮ ಬದುಕಿನ ಗುರಿಯನ್ನು ಸಾರ್ಥಕಗೊಳಿಸಿಕೊಂಡ, ತಮ್ಮ ಸಂದೇಶವನ್ನು ಜಗತ್ತಿನೆಲ್ಲೆಡೆ ಬಿತ್ತಬಲ್ಲ ದೃಢ ಸಂಕಲ್ಪದ ಯುವ ತಂಡವನ್ನು ಕಟ್ಟಬೇಕೆಂಬ ಗುರಿ ಸಾಕಾರಗೊಳಿಸಿಕೊಂಡ ಪರಮಾನಂದವೂ ಅವರನ್ನು ಆವರಿಸಿತ್ತು. ನರೇಂದ್ರರಲ್ಲಿ ಮಹಾನ್ ಆಶಾಕಿರಣವನ್ನು ಕಂಡಿದ್ದ ರಾಮಕೃಷ್ಣರು, ಅವರನ್ನು ಸಜ್ಜುಗೊಳಿಸಲು ಹೆಚ್ಚಿನ ಸಮಯ ವಿನಿಯೋಗಿಸುವ ಸಂಕಲ್ಪ ಮಾಡಿದ್ದರು. ಅಷ್ಟೇ ಅಲ್ಲದೆ, ತಮ್ಮ ಅಂತ್ಯ ಸಮೀಪಿಸುತ್ತಿರುವ ಸುಳಿವುಗಳನ್ನು ಭಕ್ತರು ಹಾಗೂ ಶಿಷ್ಯರಿಗೆ ಅದಾಗಲೇ ನೀಡಲಾರಂಭಿಸಿದ್ದರು.

ನರೇಂದ್ರರ ಆಧ್ಯಾತ್ಮಿಕ ಚೇತನದ ಬಗ್ಗೆ ರಾಮಕೃಷ್ಣರಿಗೆ ವಿಶೇಷ ಮೆಚ್ಚುಗೆ ಇತ್ತಾದ್ದರಿಂದ, ಇತರ ಶಿಷ್ಯರೂ ನರೇಂದ್ರರನ್ನು ಉದಾತ್ತ ದೃಷ್ಟಿಯಲ್ಲಿ ನೋಡತೊಡಗಿದ್ದರು. ನರೇಂದ್ರರು ಶಿಷ್ಯ ಬಳಗದಲ್ಲೇ ಅತ್ಯಂತ ಮೇಧಾವಿಯಾಗಿದ್ದರು. ಅವರು ಅತ್ಯಂತ ಮೇರು ಸ್ತರದ ವೈಚಾರಿಕ ಚಿಂತನೆಯನ್ನು ಭಕ್ತಿಯೊಂದಿಗೆ ಮೇಳೈಸುವ ಮೂಲಕ ಅನನ್ಯ ಸಾಧನೆ ಮಾಡಿದ್ದರು. ತಮ್ಮ ಗುರುವಿನ ಬೋಧನೆ, ಸನ್ಯಾಸತ್ವದ ಆಚರಣೆಗಳ ಬಗ್ಗೆ ಜನಸಾಮಾನ್ಯರಿಂದ ಹಿಡಿದು ಪ್ರತಿಯೊಬ್ಬರಿಗೂ ಅರ್ಥವಾಗುವಂತೆ ವಿವರಿಸ ಬಲ್ಲವರಾಗಿದ್ದರು. ತಮ್ಮ ವ್ಯಕ್ತಿತ್ವದ ಬಲದಿಂದಾಗಿ ಸಹೋದರ ಶಿಷ್ಯರಲ್ಲಿ ಸ್ಫೂರ್ತಿ ತುಂಬಬಲ್ಲವರಾಗಿದ್ದರು. ನರೇಂದ್ರರು ಹೀಗೆ ಪ್ರಧಾನ ಶಕ್ತಿಯಾಗಿ ರೂಪುಗೊಳ್ಳುತ್ತಿದ್ದುದನ್ನು ರಾಮಕೃಷ್ಣರು ಹಲವು ರೀತಿಯಲ್ಲಿ ಪ್ರೋತ್ಸಾಹಿಸಿದರು. 'ನರೇಂದ್ರ ನಿಮ್ಮೆಲ್ಲರ ನಾಯಕ' ಎಂಬುದನ್ನು ರಾಮಕೃಷ್ಣರು ತಮ್ಮ ಶಿಷ್ಯರೆಲ್ಲರಿಗೂ ತಿಳಿಸಿದರು. 'ನನ್ನ ಪ್ರಮುಖ ಶಿಷ್ಯನ ಆಧ್ಯಾತ್ಮಿಕ ಗ್ರಹಿಕೆಯು ಮುಂದಿನ ದಿನಗಳಲ್ಲಿ ನಿಮ್ಮೆಲ್ಲರಿಗೆ ಮಾರ್ಗದರ್ಶನವಾಗುತ್ತದೆ' ಎಂದೂ ತಿಳಿಸಿದ್ದರು.

ತಾವು ದೈವಾಧೀನರಾಗುವ ಕೆಲವೇ ದಿನಗಳ ಮುನ್ನ, ರಾಮಕೃಷ್ಣರು ನರೇಂದ್ರರೊಬ್ಬರನ್ನು ಬಿಟ್ಟು ಉಳಿದೆಲ್ಲ ಶಿಷ್ಯರನ್ನೂ ಕರೆದು, ನರೇಂದ್ರರ ಮಾತುಗಳಿಗೆ ಸಂಪೂರ್ಣ ಕಿವಿಗೊಡುವಂತೆ ಹಾಗೂ ಅವರಿಗೆ ಯಾವುದೇ ಕಿರಿಕಿರಿ ಉಂಟು ಮಾಡದಂತೆ ತಿಳಿಸಿದರು. ಬಳಿಕ, ನರೇಂದ್ರರೊಬ್ಬರನ್ನೇ ಪ್ರತ್ಯೇಕವಾಗಿ ಕರೆದು, ತಮ್ಮೆಲ್ಲ ಶಿಷ್ಯರನ್ನೂ ಅವರ ಅಧೀನಕ್ಕೆ ಒಪ್ಪಿಸಿದರು. ಅದಾದ ಮೇಲೆ ಅವರ ಕಾಯಿಲೆ ಉಲ್ಬಣಗೊಂಡು ಮಾತನಾಡುವುದೂ ಅಸಾಧ್ಯವಾಗಿದ್ದಾಗ, 'ನರೇಂದ್ರನು ಎಲ್ಲರಿಗೂ ಬೋಧಿಸುತ್ತಾನೆ' ಎಂದು ಕಾಗದದ ಚೀಟಿಯೊಂದರ ಮೇಲೆ ಬರೆದರು.

ತಮ್ಮ ಮಹಾಸಮಾಧಿಗೆ ಮೂರ್ನಾಲ್ಕು ದಿನ ಮುಂಚೆ ನರೇಂದ್ರರನ್ನು ಕರೆಸಿಕೊಂಡು, ಅವರನ್ನು ಎವೆಯಿಕ್ಕದಂತೆ ದಿಟ್ಟಿಸಿ ನೋಡುತ್ತಾ ತೀವ್ರ ಧ್ಯಾನಸ್ಥ ಸ್ಥಿತಿಯಲ್ಲಿ ಲೀನರಾದರು. ಅದೇ ಸಮಯಕ್ಕೆ ಸರಿಯಾಗಿ ವಿದ್ಯುತ್ ಆಘಾತದಂತಹ ಸೂಕ್ಷ್ಮ ಶಕ್ತಿಯೊಂದು ತಮ್ಮ ದೇಹ ಹೊಕ್ಕಂತೆ ನರೇಂದ್ರರಿಗೆ ಭಾಸವಾಗಿ, ಅವರು ಬಾಹ್ಯ ಪ್ರಜ್ಞೆಯನ್ನು ಕಳೆದುಕೊಂಡರು. ನರೇಂದ್ರರು ಎಚ್ಚರಗೊಂಡಾಗ, 'ನರೇಂದ್ರ, ಇವತ್ತು ನಾನು ನನ್ನದೆಲ್ಲವನ್ನೂ ನಿನಗೆ ಧಾರೆಯೆರೆದು ಫಕೀರನಾಗಿದ್ದೇನೆ. ನಾನು ನಿನಗೆ ವರ್ಗಾಯಿಸಿರುವ ಬಲದಿಂದಾಗಿ ನೀನು ಹಲವಾರು ಮಹಾನ್ ಕಾರ್ಯಗಳನ್ನು ಸಾಧಿಸುತ್ತೀಯ; ಬಳಿಕವಷ್ಟೇ ನೀನು ಎಲ್ಲಿಂದ ಬಂದೆಯೋ ಅಲ್ಲಿಗೆ ವಾಪಸ್ಸಾಗುತ್ತೀಯ' ಎಂದು ರಾಮಕೃಷ್ಣರು ಹೇಳಿದರು.

ಒಬ್ಬ ಉದಾತ್ತ ನಾಯಕ, ಸನ್ಯಾಸಿ, ಆಧ್ಯಾತ್ಮಿಕ ಬೋಧಕ ಹಾಗೂ ಭಾರತದೊಟ್ಟಿಗೆ ಇಡೀ ಜಗತ್ತಿನ ಭವಿಷ್ಯವನ್ನು ಬದಲಾಯಿಸಿದ ಸ್ಫೂರ್ತಿದಾಯಕ ವ್ಯಕ್ತಿ ಉದಯಿಸಿದ ಬಗೆ ಇದು. ◆